**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ. ಸಿ.ಸಿ ನಂ.1088/2025.**

ಪಿರ್ಯಾದುದಾರರುಃ- ಸಿಂಧ್ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,
ಮಂಕಿ, ತಾಲೂಕುಃ ಹೊನ್ನಾವರ.
ಪ್ರತಿನಿಧಿಸುವವರು,
ಶ್ರೀ ಗಣಪತಿ ನಾಯ್ಕ,
ವೃತ್ತಿಃ- ಮ್ಯಾನೇಜರ.

**-ವಿರುದ್ಧ-**

ಆರೋಪಿಯ ಹೆಸರುಃ- ಸಂತೋಷ ಶ್ರೀಧರ ನಾಯ್ಕ,
ಸಾಕೀನಃ- ಅರ್ಲೆ,
ಪೋಸ್ಟಃ ಅನಂತವಾಡಿ,
ತಾಲೂಕುಃ- ಹೊನ್ನಾವರ, (ಉ.ಕ.).

****

**ಭಾರತೀಯಾ ನ್ಯಾಯಾ ಸುರಕ್ಷಾ ಸಂಹಿತೆ ಕಲಂ. 351 ರನ್ವಯ ಆರೋಪಿಯ ಹೇಳಿಕೆ.**

ಪ್ರಶ್ನೆಃ 1. ನೀವು ಪಿರ್ಯಾದುದಾರರ ಪರವಾಗಿ ಫ್ರಾಸಾ-1 ರವರ ಹೇಳಿಕೆಯನ್ನು ಕೇಳಿದ್ದೀರಾ?

ಆರೋಪಿಯ ಉತ್ತರಃ- ಕೇಳಿದ್ದೇನೆ

ಪ್ರಶ್ನೆಃ 2. ಫ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಪಿರ್ಯಾದಿಯವರ ಸಂಸ್ಥೆಯಲ್ಲಿ ದಿನಾಂಕಃ 27-04-2023 ರಂದು ಸಾಲದ ಖಾತೆ ಸಂಖ್ಯೆಃ 3200332 ರಡಿಯಲ್ಲಿ ಜಾಮೀನು ಸಾಲವನ್ನು ಪಡೆದಿದ್ದು ಇರುತ್ತದೆ. ಸದರಿ ಸಾಲಕ್ಕೆ ಸಂಬಂಧಪಟ್ಟಂತೆ ನೀವು ಪಿರ್ಯಾದಿ ಸಂಸ್ಥೆಯ ಹೆಸರಿಗೆ ನಿಮ್ಮ ಬ್ಯಾಂಕ್ ಖಾತೆಯುಳ್ಳ **ಕೆನರಾ ಬ್ಯಾಂಕ್., ಮಂಕಿ** ಶಾಖೆಯ ನಿಪಿ-1 ರ ಚೆಕ್ ನಂ.240436 ನ್ನು ದಿನಾಂಕ 13-02-2025 ರಂದು ರೂ. 2,00,424/- ಎಂದು ನಮೂದಿಸಿ ಚೆಕ್ ಗೆ ಸಹಿ ಮಾಡಿಕೊಟ್ಟು, ಸದರಿ ಚೆಕ್ ನ್ನು ಬ್ಯಾಂಕ್ ಗೆ ಹಾಜರುಪಡಿಸಿದ ಕೂಡಲೇ ಹಣ ಸಿಗುತ್ತದೆ ಎಂದು ಭರವಸೆ ನೀಡಿರುತ್ತೀರೆಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ- ಸುಳ್ಳು

ಪ್ರಶ್ನೆಃ 3. ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಪಿರ್ಯಾದಿಯವರು ಹಣ ಪಡೆಯುವ ಸಲುವಾಗಿ ಸದರಿ ಚೆಕನ್ನು ಅವರ ಸಂಸ್ಥೆಯ ಖಾತೆಯಿರುವ **ಕೆನರಾ ಡಿಸಿಸಿ ಬ್ಯಾಂಕ್., ಮಂಕಿ** ಶಾಖೆಯಲ್ಲಿ ಹಾಜರುಪಡಿಸಿದಾಗ, ಸದರಿ ಬ್ಯಾಂಕ್ ನವರು, 'Funds Insufficient' ಎಂದು ತಿಳಿಸಿ ಸದರಿ ಚೆಕನ್ನು ದಿನಾಂಕ 17-02-2025 ರಂದು ನಿಪಿ-2 ರ ಮೆಮೋದೊಂದಿಗೆ ವಾಪಾಸ್ ನೀಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ- ಸುಳ್ಳು

ಪ್ರಶ್ನೆಃ 4. ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಪಿರ್ಯಾದಿಯವರು ನಿಮಗೆ ವಕೀಲರ ಮೂಲಕ ದಿನಾಂಕ 13-03-2025 ರಂದು ನಿಪಿ-3 ರಂತೆ ರಿಜಿಸ್ಟರ್ ನೋಟಿಸ್ ಕಳುಹಿಸಿದ್ದು, ಸದರಿ ನೋಟಿಸ್ ಆರೋಪಿಯಾದ ನಿಮಗೆ ದಿನಾಂಕ 20-03-2025 ರಂದು ಜಾರಿಯಾಗಿದ್ದರೂ ಸಹ ನೀವು ಸದರಿ ಚೆಕ್ ನಲ್ಲಿ ನಮೂದಿಸಿದ ಹಣವನ್ನು ನೀಡಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ- ಸುಳ್ಳು

ಪ್ರಶ್ನೆಃ 5. ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಿಪಿ-5 ರ ಆಥೋರೈಸೇಷನ್ ಲೆಟರನ್ನು ಹಾಜರುಪಡಿಸಿ ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ- ಸುಳ್ಳು

ಪ್ರಶ್ನೆ 6: ನಿಮ್ಮ ಪರವಾಗಿ ಏನಾದರೂ ಸಾಕ್ಷಿ ಇದೆಯೇ?

ಆರೋಪಿಯ ಉತ್ತರಃ- ಇದೆ

ಪ್ರಶ್ನೆ 7: ಸದ್ರಿ ಪ್ರಕರಣ ಕುರಿತು ನೀವು ಏನಾದರೂ ಹೇಳುವುದು ಇದೆಯೇ?

ಆರೋಪಿಯ ಉತ್ತರಃ- ಆರೋಪ ಸುಳ್ಳು

(ಈ ಮೂಲಕ ಪ್ರಮಾಣಿಸುವುದೇನೆಂದರೆ ಆರೋಪಿಯು ಕೊಟ್ಟಂತ ಹೇಳಿಕೆಯ ಉತ್ತರವನ್ನು ಪಡೆಯಲಾಗಿದೆ )

ಸಹಿ ಇದೆ/-

**ದಿನಾಂಕಃ- 22-09-2025.**

**(ಅನಿಲ್ ಜೋನ್ ಸಿಕ್ವೇರಾ).,**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ.,ಯವರ ನ್ಯಾಯಾಲಯ.,ಹೊನ್ನಾವರ.**

****

ಆರೋಪಿಯ ಸಹಿಃ- ಸಹಿ ಇದೆ.